೧೧–೨೦ ಎ.ಎಂ.

(೪) ಮೈಸೂರು–ಚಾಮರಾಜನಗರಕ್ಕೆ ಹೆಚ್ಚಿನ ಬಸ್ಸುಗಳನ್ನು ಓಡಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಮೈಸೂರಿನಿಂದ ಚಾಮರಾಜನಗರಕ್ಕೆ ಪ್ರಯಾಣಿಕರ ಸಂಖ್ಯೆ ವಿಪರೀತವಾಗಿದೆ. ಆದರೆ ಅದಕ್ಕೆ ತಕ್ಕಂತೆ ಬಸ್‌ಗಳನ್ನು ಸಾರಿಗೆ ಸಂಸ್ಥೆಯವರು ಹಾಕಿಲ್ಲ. ಮಧ್ಯಾಹ್ನ ೧೧ ಘಂಟೆಯಿಂದ ಸಾಯಂಕಾಲ ೪ ಘಂಟೆಯವರೆಗೆ ಬಸ್‌ಗಳೇ ಇರುವುದಿಲ್ಲ. ಚಾಮರಾಜನಗರ ಹಾಗೂ ಮೈಸೂರು ಈ ಎರಡೂ ಕಡೆಯಿಂದ ಇದೇ ಸ್ಥಿತಿಯಾಗಿದೆ. ಆದಕಾರಣ ಕೂಡಲೇ ಮೈಸೂರು ಚಾಮರಾಜನಗರ ಬಗ್ಗೆ ಕನಿಷ್ಠ ಒಂದು ಘಂಟೆಗೆ ಒಂದರಂತೆ ಎಕ್ಸ್‌ಪ್ರೆಸ್ ಬಸ್‌ಗಳನ್ನು ಓಡಿಸಬೇಕು. ಲಾಭದಾಯಕವಾದ ಈ ಮಾರ್ಗವನ್ನು ತಮಿಳುನಾಡು ಸಾರಿಗೆ ಸಂಸ್ಥೆಯವರಿಗೆ ಮತ್ತು ಖಾಸಗಿಯವರಿಗೆ ಬಿಟ್ಟುಕೊಡಬಾರದು. ಕೂಡಲೇ ಈ ಬಗ್ಗೆ ಪರಿಶೀಲನೆ ನಡೆಸಿ ಈಗಿರುವ ಪ್ರಾಣ ಸಂಚಾರ ವೇಳಾಪಟ್ಟಿಯನ್ನು ಮರುಪರಿಶೀಲನೆ ಮಾಡಿ, ಸಾರ್ವಜನಿಕರಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಬಸ್‌ಗಳ ಸಂಚಾರವನ್ನು ಹೆಚ್ಚಿಸಬೇಕೆಂದು ಕೋರುತ್ತೇನೆ. ಹಾಗೂ ಈ ಎರಡೂ ನಗರಗಳ ಮಧ್ಯೆ ಓಡುತ್ತಿರುವ ತಡೆರಹಿತ ಬಸ್ ಸೌಲಭ್ಯವನ್ನೂ ಹೆಚ್ಚಿಸಬೇಕೆಂದು ಕೋರುತ್ತೇನೆ. ಮತ್ತು ಮೈಸೂರು ಬಿಳಿಗಿರಿರಂಗನ ಬೆಟ್ಟದ ನಡುವೆ ಸಾಕಷ್ಟು ಬಸ್ ಇಲ್ಲದೆ ಪ್ರಯಾಣಿಕರಿಗೆ ತೊಂದರೆಯಾಗಿದೆ. ಆದುದರಿಂದ ಮೈಸೂರು ಬಿಳಿಗಿರಿರಂಗನ ಬೆಟ್ಟದ ನಡುವೆ ಬೆಳಿಗಿನ ವೇಳೆಯಲ್ಲಿ ಇನ್ನೂ ಹೆಚ್ಚು ಬಸ್ ಸೌಕರ್ಯ ವಿಪರ್ಡಿಸಿ ಪ್ರಯಾಣಿಕರು ಹಾಗೂ ಭಕ್ತಾದಿಗಳು ಪೂಜೆಯ ವೇಳೆಗೆ ಬೆಟ್ಟವನ್ನು ತಲುಪಲು ವ್ಯವಸ್ಥೆ ಮಾಡಬೇಕಾಗಿ ಕೋರುತ್ತೇನೆ. ಈ ಬಗ್ಗೆ ಸಾರಿಗೆ ಸಚಿವರು ಪರಿಶೀಲಿಸಿ ಕ್ರಮ ತೆಗೆದುಕೊಂಡು ಈ ಸಭೆಗೆ ಒಂದು ಹೇಳಿಕೆಯನ್ನು ಕೊಡುತ್ತಾರೆಂದು ನಾನು ನಂಬಿರುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೈಸೂರು–ಚಾಮರಾಜನಗರ ನಡುವೆ ಎರಡು ಕಡೆಯಿಂದಲೂ ೨೨ ಬಸ್ಸುಗಳನ್ನು ಓಡಿಸುತ್ತಿದೆ. ಇದರ ಜೊತೆಗೆ ಬೆಂಗಳೂರಿನಿಂದ ಮೈಸೂರು, ಚಾಮರಾಜನಗರ ಮಾರ್ಗವಾಗಿ ಒಂದು ಬಸ್ಸನ್ನು ಓಡಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೧–೦೦ ಗಂಟೆಯಿಂದ ೧೬–೦೦ ಗಂಟೆಗಳ ಮಧ್ಯೆ ಮೈಸೂರಿನಿಂದ ಚಾಮರಾಜನಗರಕ್ಕೆ ಈ ಕೆಳಕಂಡ ವೇಳೆ ೫ ಬಸ್ಸುಗಳನ್ನು ಓಡಿಸುತ್ತಿದೆ.

ಹೊರಡುವ ವೇಳೆ	—	ಮೈಸೂರು
೧೧.೩೦		ವೇಗಧೂತ
೧೨.೧೫		ವೇಗಧೂತ
೧೪.೦೦		ಸಾಮಾನ್ಯ
೧೪ ೧೫		ತಡೆರಹಿತ
೧೫–೧೫		ವೇಗಧೂತ

ಹಾಗೂ ೧೫.೧೫ ಗಂಟೆಯ ಮೇಲೆ ೨೩.೩೦ ಗಂಟೆಯವರೆಗೆ ಒಟ್ಟು ೮ ಬಸ್ಸುಗಳು ಹೊರಡುತ್ತವೆ. ಅದೇ ರೀತಿ ೦೬.೧೫ ಗಂಟೆಯಿಂದ ೧೧.೩೦ ಗಂಟೆಯವರೆಗೆ ೧೦ ಟ್ರಿಪ್ಪುಗಳು ಇರುತ್ತವೆ.

ಚಾಮರಾಜನಗರವು ರಾಷ್ಟ್ರೀಕರಣವಾಗಿಲ್ಲದ ವಲಯದಲ್ಲಿರುವುದರಿಂದ ಖಾಸಗಿ ಬಸ್ ಮಾಲೀಕರುಗಳು ಮೈಸೂರು–ಚಾಮರಾಜನಗರ ಮಧ್ಯೆ ಟಿ. ನರಸೀಪುರ ಮಾರ್ಗವಾಗಿ ಹಾಗೂ ನಂಜನಗೂಡು–ಚಾಮರಾಜನಗರ ನಡುವೆ ಬಸ್ಸುಗಳನ್ನು ಓಡಿಸುತ್ತಿರುತ್ತಾರೆ. ಈ ಸಾರಿಗೆಗಳು ಅಗತ್ಯಕ್ಕನುಗುಣವಾಗಿರುವುದಾಗಿ ತೀರ್ಮಾನಿಸಲಾಗಿದೆ.

ಬಿಳಿಗಿರಿರಂಗನ ಬೆಟ್ಟವು ರಾಷ್ಟ್ರೀಕರಣವಾಗಿಲ್ಲದ ವಲಯದಲ್ಲಿದೆ. ಆದಾಗ್ಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರಿಗೆ ಸೌಕರ್ಯ ಕಲ್ಪಿಸುವ ದಿಶೆಯಲ್ಲಿ ಮೈಸೂರಿನಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ೨ ಟ್ರಿಪ್ಪುಗಳನ್ನು ಓಡಿಸುತ್ತಿದೆ. ಜೊತೆಗೆ ಬೆಂಗಳೂರಿನಿಂದ ಕೊಳ್ಳೇಗಾಲ ಮಾರ್ಗವಾಗಿ ಬಿಳಿಗಿರಿರಂಗನ ಬೆಟ್ಟಕ್ಕೆ ೨ ಟ್ರಿಪ್ಪುಗಳನ್ನು ಓಡಿಸುತ್ತಿದೆ. ಈ ಸಾರಿಗೆಗಳ ಜೊತೆಗೆ ಖಾಸಗೀ ಬಸ್ಸುಗಳೂ ಬಿಳಿಗಿರಿರಂಗನ ಬೆಟ್ಟದಿಂದ ಚಾಮರಾಜನಗರಕ್ಕೂ, ಬಿಳಿಗಿರಿರಂಗನ ಬೆಟ್ಟದಿಂದ ಟಿ. ನರಸೀಪುರ ಮತ್ತು

ಬಿಳಿಗಿರಿರಂಗನ ಬೆಟ್ಟದಿಂದ ಮೈಸೂರಿಗೂ ಸಂಚರಿಸುತ್ತಿವೆ. ಪ್ರಸ್ತುತ ಈ ಸಾರಿಗೆಗಳನ್ನು ಆಗತ್ಯ ಕ್ಕನುಗುಣವಾಗಿವೆಯೆಂದು ಮನೆಗಾಣಲಾಗಿದೆ. ಈಗಾಗಲೇ ಮಳೆಗಾಲ ಪ್ರಾರಂಭವಾಗಿದ್ದು ಪ್ರಯಾಣಿಕರ ಒತ್ತಡ ಕಡಿಮೆ ಇರುತ್ತದೆ. ಹಾಗಾಗಿ ಹೆಚ್ಚಿನ ಸಾರಿಗೆಗಳು ಸದ್ಯಕ್ಕೆ ಆಗತ್ಯ ವಾಗಿರುವುದಿಲ್ಲ.

(೫) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಕಾರ್ಯಕಾರಿ ಅಭಿಯಂತರರು ಕಟ್ಟಿಸಿದ ಶಾಲಾ ಕೊಠಡಿಗಳ ಬಗ್ಗೆ

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಮಲಪ್ರಭಾ ಪ್ರಾಜೆಕ್ಟ್ ಸವಿಲಿತೀರ್ಥ ಇವರು ಎಂಟು ಶಾಲೆ ಕೋಣೆಗಳನ್ನು ೧೯೭೪ನೇ ಇಸವಿಯಲ್ಲಿ ಕಟ್ಟಿಸಿದರು. ಆದರೆ ಅದರ ಗುಣಮಟ್ಟ ಚೆನ್ನಾಗಿಲ್ಲದೆ ಇರುವುದರಿಂದ ಆವುಗಳನ್ನು ಶಿಕ್ಷಣ ಇಲಾಖೆಗೆ ಇದುವರೆಗೆ ಹಸ್ತಾಂತರ ಮಾಡಿರುವುದಿಲ್ಲ. ಈಗ ಆ ಎಂಟು ಶಾಲೆ ಕೋಣೆಗಳು ಬಿದ್ದಿದ್ದು ಕಿಟಕಿ ಬಾಗಿಲುಗಳನ್ನು ಜನರು ತೆಗೆದುಕೊಂಡು ಹೋಗಲಿಕ್ಕೆ ಹತ್ತಿರುವರು. ಮತ್ತು ಮಕ್ಕಳ ಮೇಲೆ ಯಾವುದೇ ಪ್ರಸಂಗ ದಲ್ಲಿ ಶಾಲೆ ಬೀಳುವ ಪರಿಸ್ಥಿತಿ ಇದೆ. ಆದುದರಿಂದ ಕೂಡಲೇ ಆ ಕಟ್ಟಡವನ್ನು ಕೆಡವಿ ಅದೇ ಜಾಗದಲ್ಲಿ ಅದೇ ಕಲ್ಲು ಮಣ್ಣು ಕಿಟಕಿ, ಬಾಗಿಲು ಉಪಯೋಗಿಸಿ ಶಾಲೆ ಕೋಣೆ ಕಟ್ಟಡ ಕಟ್ಟಲು ಮುಖ್ಯ ಇಂಜಿನಿಯರ್, ಇರಿಗೇಷನ್ ಉತ್ತರ ವಲಯ, ಬೆಳಗಾಂ ಇವರಿಗೆ ಆದೇಶ ನೀಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಲಪ್ರಭಾ ಯೋಜನೆಯ ಸಂಗೊಳ್ಳಿ ಪುನರ್ವಸತಿ ಗ್ರಾಮದಲ್ಲಿ ೧೯೭೪ನೇ ಸಾಲಿನಲ್ಲಿ ೮ ಕೊಠಡಿ ಗಳುಳ್ಳ ಶಾಲಾ ಕಟ್ಟಡವನ್ನು ಯೋಜನೆಯ ಪುನರ್ವಸತಿ ಅನುದಾನದಲ್ಲಿ ಕಟ್ಟಲಾಯಿತು. ಈ ಶಾಲಾ ಕಟ್ಟಡದ ಗುಣಮಟ್ಟ ಉತ್ತಮವಾಗಿಲ್ಲದುದರಿಂದ ಈ ಕಟ್ಟಡದಲ್ಲಿ ಶಾಲೆ ನಡೆಸಲಾಗಲಿಲ್ಲ. ಈ ಕಟ್ಟಡ ವನ್ನು ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್‌ರವರು ದಿನಾಂಕ ೨೭ನೇ ಸೆಪ್ಟೆಂಬರ್ ೧೯೮೫ರಲ್ಲಿ ಪರಿವೀಕ್ಷಣೆ ನಡೆಸಿ ಶಾಲೆಯನ್ನು ನಡೆಸಲು ಕಟ್ಟಡವೂ ಯೋಗ್ಯವಿಲ್ಲವೆಂದು ವರದಿ ಮಾಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ ೧೭೬ ಎಸ್.ಡಿ.ಎ ೮೧ ದಿನಾಂಕ ೩ನೇ ಡಿಸೆಂಬರ್ ೧೯೮೬ ರಲ್ಲಿ ಈ ವಿಷಯವಾಗಿ ವಿಚಾರಣೆ ನಡೆಸಲು ಲೋಕಾಯುಕ್ತದ ರಿಜಿಸ್ಟ್ರಾರ್ ನಂ. ೫ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಯಿತು. ಈ ಸಂಬಂಧದಲ್ಲಿ ಲೋಕಾಯುಕ್ತದ ವರದಿ ಇನ್ನೂ ಬಂದಿರುವುದಿಲ್ಲ. ಈ ಶಾಲಾ ಕಟ್ಟಡದ ವಿಚಾರಣೆಯು ಲೋಕಾಯುಕ್ತದ ಮುಂದೆ ಇರುವುದರಿಂದ ಈ ಹಂತದಲ್ಲಿ ಅಲ್ಲಿ ಕಟ್ಟಡವನ್ನು ಬೇಸ್‌ಮೆಂಟ್ ಮಟ್ಟದವರೆಗೂ ಕೆಡವಿ ಅದರಿಂದ ದೊರೆಯುವ ಕಿಟಕಿ, ಬಾಗಿಲು ಮತ್ತು ಇತರ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ಹೊಸ ಕಟ್ಟಡವನ್ನು ಕಟ್ಟಲು ಸಾಧ್ಯವಿಲ್ಲ. ಆದರೂ ಈ ಶಾಲಾ ಕಟ್ಟಡದ ಬಳಿ ಮಕ್ಕಳು ಹೋಗಿ ಆದರಿಂದ ತೊಂದರೆ ಆಗದಂತೆ ತಡೆಯಲು ಈ ಶಾಲಾ ಕಟ್ಟಡದ ಸುತ್ತಲೂ ಬೇಲಿ ಹಾಕಿಸಲಾಗುವುದು.

ಸ್ಥಳೀಯ ಶಾಸಕರ ಕೋರಿಕೆಯಂತೆ ಒಂದು ಹೊಸ ಶಾಲಾ ಕಟ್ಟಡವನ್ನು ಈ ಪುನರ್ವಸತಿ ಕೇಂದ್ರದಲ್ಲಿ ಕಟ್ಟಿಕೊಡಲಾಗಿದ್ದೂ ಈ ಕಟ್ಟಡದಲ್ಲಿ ಶಾಲೆಯನ್ನು ಈಗಾಗಲೇ ನಡೆಸಲಾಗುತ್ತಿದೆ.

[೬] ದಕ್ಷಿಣ ಕನ್ನಡದ ಕಂಬಳಗದ್ದೆಯ ಶ್ರೀಮತಿ ಸುಜಾತ ಮತ್ತು ಶ್ರೀ ಜಯರಾಮ ಶೆಟ್ಟಿ ಯವರಿಗೆ ರಕ್ಷಣೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಕಂಬಳಗದ್ದೆಯ ಮನೆ ಬೈದೆಬೆಟ್ಟುವಿನ ಭೋಜರಾಜ ಶೆಟ್ಟಿಯ ಮಗಳು ಸುಜಾತಾ ಹಾಗೂ ಕೆಂಜೂರು ಗ್ರಾಮದ ಬೇರಾಲು ನಾರಾಯಣ ಶೆಟ್ಟರ ಮಗ ಜಯರಾಮ ಶೆಟ್ಟಿ ಸಂಬಂಧಿಕರಾಗಿದ್ದು ಒಬ್ಬರನೊಬ್ಬರು ಪ್ರೀತಿಸಿ ಮದುವೆ ಯಾಗುವ ಹಂತಕ್ಕೆ ಬಂದಾಗ ಸುಜಾತಳ ತಂದೆ ಅದನ್ನು ವಿರೋಧಿಸಿ ಅವರಿಗೆ ನಾನಾ ತರಹದ ಚಿತ್ರ ಹಿಂಸೆ ಕೊಟ್ಟು ಜಯರಾಮನಿಗೆ ಹೊಡೆದು ಜಖಂ ಮಾಡಿ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆದು ಈಗ ಅವರು ಮದುವೆಯಾಗಿ ಅವರ ಸಂಬಂಧಿಕರಲ್ಲೊಬ್ಬರ ಮನೆಯಲ್ಲಿ ಗುಪ್ತವಾಗಿ